## ಗ್ಲಾಮರಸ್ ‘ಜಿಲೇಬಿ’



‘ಜಿಲೇಬಿ’ ಸಿದ್ಧವಾಗಿದೆ. ಚಿತ್ರರಸಿಕರ ಪಾಲಿಗೆ ಇದು ಅಪರೂಪದ ಸಿಹಿ ಎನ್ನುವುದು ನಿರ್ದೇಶಕ ಲಕ್ಕಿ ಶಂಕರ್ ಅನಿಸಿಕೆ. ಫೆಬ್ರುವರಿ ತಿಂಗಳ ಕೊನೆಯಲ್ಲಿ ಚಿತ್ರವನ್ನು ತೆರೆಗೆ ತರುವುದು ಅವರ ಉದ್ದೇಶ. ಅದೇ ವೇಳೆಗೆ, ಸುದೀಪ್ ಅಭಿನಯದ ‘ಹೆಬ್ಬುಲಿ’ ಚಿತ್ರ ಕೂಡ ತೆರೆ ಕಾಣಲಿದೆ. ಹುಲಿ ಗರ್ಜನೆ ಜೋರಾಗಿದ್ದರೂ, ಜಿಲೇಬಿಯ ಸಿಹಿ ಮತ್ತು ಸೌಂದರ್ಯಕ್ಕೆ ಪ್ರೇಕ್ಷಕರು ಮಾರುಹೋಗುತ್ತಾರೆ ಎನ್ನುವುದು ಅವರ ನಂಬಿಕೆ.

ಪೂಜಾ ಗಾಂಧಿ ‘ಜಿಲೇಬಿ’ಯ ಕೇಂದ್ರಬಿಂದು. ಒಂದರ್ಥದಲ್ಲಿ ಚಿತ್ರದಲ್ಲಿ ಸಿಹಿಗಿಂತಲೂ ಗ್ಲಾಮರ್ ಅಂಶವೇ ಹೆಚ್ಚಾಗಿರುವಂತಿದೆ. ಟ್ರೇಲರ್ ನೋಡಿದರೆ, ಚಿತ್ರದಲ್ಲಿ ಪೂಜಾ ಸಖತ್ ಹಾಟ್ ಆಗಿ ಕಾಣಿಸಿಕೊಂಡಿರುವಂತಿದೆ. ಹೇಳಿಕೇಳಿ ಚಿತ್ರದಲ್ಲಿ ಅವರದು ಬೆಲೆಹೆಣ್ಣಿನ ಪಾತ್ರ. ಹಾಗಾಗಿ, ಕಥೆಯ ಕಾರಣಕ್ಕಾಗಿ ಪೂಜಾ ಬಿಡುಬೀಸಾಗಿ ಕಾಣಿಸಿಕೊಂಡಿರುವುದು ಸಹಜವಾಗಿಯೇ ಇದೆ. ಹಿಂದಿನ ಚಿತ್ರಗಳಾದ ‘ದಂಡುಪಾಳ್ಯ’ ಹಾಗೂ ‘ಅಭಿನೇತ್ರಿ’ ಚಿತ್ರಗಳಲ್ಲೂ ನಟನೆಗೆ ಅವಕಾಶ ಇರುವ ಪಾತ್ರಗಳಲ್ಲೇ ಅವರು ಕಾಣಿಸಿಕೊಂಡಿದ್ದರು.

ಎರಡು ದಿನಗಳ ಅವಧಿಯಲ್ಲಿ ಮೂವರು ಬ್ರಹ್ಮಚಾರಿ ಹುಡುಗರು ಹಾಗೂ ಯುವತಿಯೊಬ್ಬಳ ಮಧ್ಯೆ ನಡೆಯುವ ಕಥೆ ಚಿತ್ರದಲ್ಲಿದೆ. ಬಡ ಕುಟುಂಬದ ಹೆಣ್ಣುಮಗಳೊಬ್ಬಳು ಸಮಾಜವನ್ನು ಎದುರಿಸಿ ಬದುಕು ಕಟ್ಟಿಕೊಳ್ಳಲು ಹಂಬಲಿಸುವ ದಿಟ್ಟತನದ ಕಥೆ ಚಿತ್ರದಲ್ಲಿದೆಯಂತೆ. ಹಾಸ್ಯದ ಜೊತೆಗೆ ರೋಚಕ ಅಂಶಗಳೂ ಕಥೆಯಲ್ಲಿವೆ ಎನ್ನುವ ಲಕ್ಕಿ ಶಂಕರ್, ‘ಜಿಲೇಬಿ’ ತಮ್ಮ ವೃತ್ತಿಬದುಕಿಗೆ ಸಿಹಿಯಾಗಿ ಪರಿಣಮಿಸುವ ವಿಶ್ವಾಸದಲ್ಲಿದ್ದಾರೆ.

ಯಶಸ್ ಸೂರ್ಯ, ವಿಜಯ ಚೆಂಡೂರ್, ನಾಗೇಂದ್ರ, ರಾಕ್‌ಲೈನ್ ಸುಧಾಕರ್, ದತ್ತಣ್ಣ ಹಾಗೂ ಶೋಭರಾಜ್ ತಾರಾಗಣದಲ್ಲಿರುವ ಪ್ರಮುಖರು. ಜೇಮ್ಸ್ ಸಂಗೀತ ನಿರ್ದೇಶನ ಹಾಗೂ ಎಂ.ಆರ್. ಸೀನು ಛಾಯಾಗ್ರಹಣ ಚಿತ್ರಕ್ಕಿದೆ.



## ಈ ಕಾಲದ ಸುಂದರಿ!

ಇದು ಪ್ರೇಕ್ಷಕರನ್ನು ಕಲ್ಪನಾಲಹರಿಯಲ್ಲಿ, ಕಾಲದ ಹರಿಗೋಲಲ್ಲಿ ತೇಲಿಸಲಿರುವ ಸಿನಿಮಾ! ಇದು ‘ಸುವರ್ಣ ಸುಂದರಿ’ ಚಿತ್ರದ ಬಗ್ಗೆ ನಿರ್ದೇಶಕ ಸೂರ್ಯ ಅವರ ಬಣ್ಣನೆ. ತೆಲುಗಿನಲ್ಲಿ ಹಲವು ಚಿತ್ರಗಳಲ್ಲಿ ಚಿತ್ರಕಥೆ ರಚಿಸಿರುವ ಅವರು ಪತ್ರಕರ್ತರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇದೀಗ, ‘ಸುವರ್ಣ ಸುಂದರಿ’ ಮೂಲಕ ನಿರ್ದೇಶನದ ಅಗ್ನಿದಿವ್ಯಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಪ್ರೇಕ್ಷಕರಿಗೆ ಹೊಸ ದೃಶ್ಯ ಅನುಭವ ನೀಡುವ ಮಹತ್ವಾಕಾಂಕ್ಷೆ ಅವರದು.



ತೆಲುಗಿನಲ್ಲಿ ಈಗಾಗಲೇ ‘ಸುವರ್ಣ ಸುಂದರಿ’ ಎನ್ನುವ ಚಿತ್ರವೊಂದಿದೆ. ಅಕ್ಕಿನೇನಿ ನಾಗೇಶ್ವರರಾವ್ ನಟನೆಯ ಹಳೆಯ ಸುಂದರಿ ಪ್ರೇಕ್ಷಕರ ಮನಸೂರೆಗೊಂಡಿದ್ದಳು. 60 ವರ್ಷಗಳ ನಂತರ ಅದೇ ಹೆಸರಿನಲ್ಲಿ ರೂಪುಗೊಳ್ಳುತ್ತಿರುವ ಈ ಕಾಲದ ಸುಂದರಿಯೂ ಯಶಸ್ಸು ಗಳಿಸುವ ಬಗ್ಗೆ ಸೂರ್ಯ ಅವರಿಗೆ ಅಪಾರ ವಿಶ್ವಾಸವಿದೆ.

‘ಸುವರ್ಣ ಸುಂದರಿ’ ಕನ್ನಡದ ಜೊತೆಗೆ ತೆಲುಗಿನಲ್ಲೂ ರೂಪುಗೊಳ್ಳುತ್ತಿದೆ. ತೆಲುಗಿನಲ್ಲಿ ಈಗಾಗಲೇ ಒಂದು ವಾರದ ಚಿತ್ರೀಕರಣವೂ ನಡೆದಿದೆ. ಕಳೆದ ವಾರ ಕನ್ನಡ ಚಿತ್ರದ ಮುಹೂರ್ತ ನಡೆಸಿದ ಅವರು, ಕನ್ನಡ ಅವತರಣಿಕೆಯೇ ಮೊದಲು ತೆರೆಕಾಣಲಿದೆ ಎಂದರು. ಬೆಂಗಳೂರು ಸೇರಿದಂತೆ ವಿವಿಧೆಡೆಗಳಲ್ಲಿ ಎಪ್ಪತ್ತೈದು ದಿನಗಳ ಚಿತ್ರೀಕರಣ ನಡೆಯಲಿದೆ. ವಿಜಯನಗರ ಸಾಮ್ರಾಜ್ಯದ ಅವಧಿಯ ಜೊತೆಗೆ ಸಮಕಾಲೀನ ಸಂದರ್ಭವೂ ಚಿತ್ರದಲ್ಲಿ ಅನಾವರಣಗೊಳ್ಳಲಿದೆಯಂತೆ. ಗ್ರಾಫಿಕ್ಸ್ ಚಮತ್ಕಾರವೂ ಚಿತ್ರದಲ್ಲಿ ಇರಲಿದೆಯಂತೆ.

ತಾರಾಗಣದಲ್ಲಿ ಹೊಸ ಪ್ರತಿಭೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪೂರ್ಣ, ಸಾಕ್ಷಿ, ತಿಲಕ್, ಮೊಹಮ್ಮದ್ ಖಾನ್, ಸಾಯಿಕುಮಾರ್ ಹಾಗೂ ಅವಿನಾಶ್ ತಾರಾಗಣದಲ್ಲಿರುವ ಪ್ರಮುಖರು. ಸಾಯಿ ಕಾರ್ತೀಕ್ ಸಂಗೀತ ಹಾಗೂ ಈಶ್ವರ್ ಛಾಯಾಗ್ರಹಣ ಚಿತ್ರಕ್ಕಿದೆ.